ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 30 ನೇ ಸೆಪ್ಟೆಂಬರ್, 2020

ಗುತ್ತಿಗೆದಾರರಿಗೆ ಬಿಲ್ಲುಗಳ ಪಾವತಿ ಕುರಿತು

ಶ್ರೀ ಎನ್. ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು) -

1143 (1231) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಪಿ. ಡಬ್ಲ್ಯೂ. ಡಿ. ಇಲಾಖೆಯಲ್ಲಿ ಎಷ್ಟು ಮೊತ್ತದ ಬಿಲ್ಲುಗಳು ಗುತ್ತಿಗೆದಾರರಿಗೆ ಪಾವತಿಯಾಗಲು ಬಾಕಿ ಇವೆ; (ಜಿಲ್ಲಾವಾರು ಮತ್ತು ಯಾವ ವರ್ಷದ ಬಿಲ್ಲುಗಳು ಪಾವತಿಸಲು ಬಾಕಿ ಇವೆ ಎಂಬುದರ ಕುರಿತು ವರ್ಷವಾರು ಮಾಹಿತಿ ನೀಡುವುದು)

(ಆ) ಕಳೆದ ಎರಡು ವರ್ಷಗಳಲ್ಲಿ ಗುತ್ತಿಗೆದಾರರಿಗೆ ಪಾವತಿಸಲು ಬಿಡುಗಡೆಗೊಂಡ ಮೊತ್ತವೆಷ್ಟು; ಯಾವ ಗುತ್ತಿಗೆದಾರರಿಗೆ ಎಷ್ಟು ಮೊತ್ತವನ್ನು ಪಾವತಿಸಲಾಗಿದೆ; (ತಿಂಗಳವಾರು, ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಗುತ್ತಿಗೆದಾರರು ಕೆಲಸವನ್ನು ಪೂರ್ಣಗೊಳಿಸಿದ ಎಷ್ಟು ಸಮಯದ ಬಳಿಕ ಗುತ್ತಿಗೆದಾರರಿಗೆ ಬಾಕಿ ಮೊತ್ತದ ಬಿಲ್ಲುಗಳ ಪಾವತಿಯಾಗುತ್ತಿದೆ; ಸರ್ಕಾರದಿಂದ ವಿಳಂಬ ಪಾವತಿಗೆ ಬಡ್ಡಿ ನೀಡಲಾಗುತ್ತಿದೆಯೇ; ಇದುವರೆಗೆ ಎಷ್ಟು ಗುತ್ತಿಗೆದಾರರಿಗೆ ಬಡ್ಡಿ ಪಾವತಿಸಲಾಗಿದೆ;

(ಈ) ಗುತ್ತಿಗೆದಾರರಿಗೆ ಬಾಕಿ ಮೊತ್ತವನ್ನು ಪಾವತಿಸಲು ಸರ್ಕಾರವು ಯಾವ ರೀತಿಯ ನಿಯಮಗಳನ್ನು ಅನುಸರಿಸುತ್ತದೆ; ಸಮರ್ಪಕ ಮಾರ್ಗ ಸೂಚಿಗಳನ್ನು ಹೊರಡಿಸಲಾಗಿದೆಯೇ? (ಮಾರ್ಗಸೂಚಿಯ ಪ್ರತಿ ಒದಗಿಸುವುದು)